೧೫-೬-೮೭ರಿಂದ ೧೬-೧೦-೮೭ರವರೆಗೆ ನೀರು ಕೊಡಲಾಗುವುದು ಎಂದು ರೈತರಿಗೆ ನೋಟೀಸು ಕೊಟ್ಟಿರುತ್ತಾರೆ. ಈ ನೋಟೀಸಿನಿಂದಾಗಿ ನೀರು ಕೊಡದ್ಯಾಗ್ಯೂ ರೈತರ ಮೇಲೆ ಕರ ಹೇರುವ ಸಂಭವವಿದ್ದು ಸರ್ಕಾರ ಕೂಡಲೇ ಪಂಪುಸೆಟ್ಟುಗಳ ರಿಪೇರಿ ಮಾಡಿಸುವುದಲ್ಲದೆ ರೈತರ ಮೇಲೆ ಕರ ಹೇರದಿರುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಬಾದಾಮಿ ತಾಲ್ಲೂಕಿನ ಅಲ್ಲೂರ ಬಿ.ಕೆ. ಮತ್ತು ನೀರಾವರಿ ಯೋಜನೆಯಲ್ಲಿನ ಪಂಪುಸೆಟ್ಟು ಕೂಡ ಕೆಟ್ಟು ಹೋಗಿ ಬಹಳ ದಿನಗಳಾಗಿದ್ದಾಗ್ಯೂ ರಿಪೇರಿಯಾಗಿರುವುದಿಲ್ಲ. ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗಿದ್ದು, ಈ ಪಂಪುಸೆಟ್ಟನ್ನು ಕೂಡಲೇ ರಿಪೇರಿ ಮಾಡಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವುಬಾರಿ ತಿಳಿಸಿದ್ದಾಗ್ಯೂ ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲದಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಬಂದರು ಮತ್ತು ಒಳನಾಡು ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಕಾರ್ಯನಿಮಿತ್ತ ದೆಹಲಿಗೆ ಹೋಗಿರುತ್ತಾರೆ. ಅವರು ಅಲ್ಲಿಂದ ವಾಪಸು ಬಂದ ಮೇಲೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿಕೊಡುವಂತೆ ಹೇಳುತ್ತೇನೆ.

(ಶ್ರೀ ಬಿ.ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

17 ಹುಣಸೂರು ಕಾಫೀ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಅವ್ಯವಹಾರ ನಡೆದಿರುವುದು.

ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ಕೊಡಗು ಕಾಫಿ ಬೆಳೆಗಾರರ ಸಹಕಾರಿ ಸಂಘದ ಹುಣಸೂರು ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಸುಮಾರು ೧೦ ರಿಂದ ೧೫ ಲಕ್ಷದಷ್ಟು ಅವ್ಯವಹಾರ ನಡೆದಿರುವುದಾಗಿಯೂ, ಇದಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಬೇಕಾಗಿಯೂ, ಸದರಿ ಸಂಘದ ೧೯೮೫-೮೪, ೮೪-೮೫, ೮೫-೮೬ರ ಆಡಿಟ್ ವರದಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವುದಾಗಿಯೂ ತಿಳಿದು ಬಂದಿದೆ. ಸಂಘದ ನಾಲ್ಕು ಜನ ಅಧಿಕಾರಿಗಳು ೫ ಜನ ಇತರ ಹಿಬ್ಬಂದಿವರ್ಗದವರು ಕಾಫಿಬೋರ್ಡ್‌ನ ಪೂಲ್ ಫಂಡ್ ಲೆಕ್ಕದಿಂದ ಈ ಅವ್ಯವಹಾರ ನಡೆಸಿದ್ದರೂ ಸಿ.ಓ.ಡಿ.ಯವರು ಒಬ್ಬರ ಮೇಲೆ ಮಾತ್ರ ತನಿಖೆ ನಡೆಸಿ ಅಪರಾಧ ಹೊರಿಸಿರುವುದು, ತಪ್ಪಿತಸ್ಥರ ಮೇಲೆ ಸಿವಿಲ್ ಅಥವಾ ಕ್ರಿಮಿನಲ್ ಕ್ರಮ ಕೈಗೊಳ್ಳದಿರುವುದು, ಅವ್ಯವಹಾರಕ್ಕೆ ಕಾರಣರೆಂದು, ಆಡಿಟ್ ವರದಿಯಲ್ಲಿ ಉಲ್ಲೇಖಿಸಲ್ಪಟ್ಟವರೇ ಸದ್ರಿ ಸಂಸ್ಥೆಯಲ್ಲಿ ಮುಂದುವರಿಯುತ್ತಿರುವುದು ತಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲು, ಆಡಿಟ್ ವರದಿಯಿಂದ ತಮ್ಮ ಹೆಸರನ್ನು ತೆಗೆಸಿಹಾಕಬೇಕೆಂದು ಡೈರೆಕ್ಟರ್ ಆಫ್ ಕೋ ಆಪರೇಟಿವ್ ಆಡಿಟ್ ಅವರಿಗೆ ಸಹಕಾರಿ ಸಂಘಗಳ ಕಾಯಿದೆಯಲ್ಲಿ ಅಂಥ ಅವಕಾಶವಿಲ್ಲದಿದ್ದರೂ ಮೇಲ್ಮನವಿ ಸಲ್ಲಿಸಿರುವುದು ಈ ಇಡೀ ಪ್ರಕರಣದ ತನಿಖೆ ಹಾಗೂ ವಸೂಲಾತಿಯು ಕಾರ್ಯಾಚರಣೆಯಲ್ಲಿ ಬಹಳಷ್ಟು ವಿಳಂಬವಾಗಿರುವುದು, ಇವು ತಪ್ಪಿಸ್ಥರನ್ನು ತಪ್ಪಿಸಿಕೊಳ್ಳಲು ಎಡೆಮಾಡಿಕೊಡುತ್ತದೆ. ಮತ್ತು ಯಾವುದೋ ಅದೃಶ್ಯ ಶಕ್ತಿ ಇವರನ್ನು ರಕ್ಷಿಸುತ್ತದೆ. ಎಂದು ಸಂಶಯಪಡುವಂತಾಗುತ್ತದೆ. ಆದ್ದರಿಂದ ಇನ್ನಾದರೂ ಸೂಕ್ತ ಕ್ರಮ ಕೂಡಲೇ ಜರುಗುವಂತೆ ಸರ್ಕಾರ ತ್ವರೆಯಿಂದ ಗಮನಹರಿಸಬೇಕಾಗಿ ಕೋರಿಕೆ.

ಶ್ರೀ ಹೆಚ್. ವಿಶ್ವನಾಥಯ್ಯ (ಮಾನ್ಯ ಸಹಕಾರ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಸದರೀ ಸಹಕಾರ ಸಂಘದ ಹುಣಸೂರು ಘಟಕದಲ್ಲಿ ೮.೪೫ ಲಕ್ಷ ರೂಪಾಯಿ ದುರುಪಯೋಗವಾಗಿದೆ. ಈ ಬಗ್ಗೆ ಕಾನೂನು ಪ್ರಕಾರ ಕಾರಣಕರ್ತರಾದವರ ಮೇಲೆ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ತೆಗೆದುಕೊಳ್ಳಲಾಗಿದೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಅವ್ಯವಹಾರದ ಆರೋಪಕ್ಕೆ ಒಳಗಾದ ಬೇರೆಯವರ ಬಗ್ಗೆಯೂ ಸಹ ಕಾನೂನು ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲು ಸರ್ಕಾರ ಪುನರ್ ಪರಿಶೀಲಿಸುತ್ತದೆ ಹಾಗೂ ತಪ್ಪಿತಸ್ಥರನ್ನು ರಕ್ಷಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂಬುದನ್ನು ತಿಳಿಸಬಯಸುತ್ತೇನೆ.